ಸ್ವೀಕರಿಸಿಲ್ಲ" ಎನ್ನುವ ಅಪಾಯವಿತ್ತು.

ಕಾಲಿಗೂ ಇದೇ ಕತೆಯೇ. ಬಿಚ್ಚಿ ಕೊಟ್ಟರೆ ರಿಪೇರಿಯಾಗಿ ಬರಬಹುದಿತ್ತೇನೋ. ಸಾಕ್ಸ್, ಶೂಗಳಂತೆ ಕಾಲುಗಳೂ ಬದಲಾಗಬಹುದಿತ್ತು. "ಅಣ್ಣಾ, ನೀನು ಫುಟ್‌ಬಾಲ್ ಚೆನ್ನಾಗಿ ಆಡ್ತೀಯಲ್ಲ. ಈವತ್ತು ನನಗೆ ಫುಟ್‌ಬಾಲ್ ಮ್ಯಾಚ್ ಇದೆ. ನಿನ್ನ ಕಾಲು ಹಾಕಿಕೊಂಡು ಹೋಗಿರ್ತೀನಿ. ಬಂದ ತಕ್ಷಣ ಕೊಡ್ತೀನಿ. ಬೇಕಾದ್ರೆ ಬರೋವಾಗ ಐಸ್‌ಕ್ರೀಮ್ ಕೂಡಾ ತೊಗೊಂಡು ಬರ್ತೀನಿ" ಎಂದು ಪೂಸಿ ಹೊಡೆದು ಹಾರುವ ತಮ್ಮಂದಿರೋ, ಸ್ನೇಹಿತರೋ ಇರುತ್ತಿದ್ದರು. ಅಪ್ಪ ಕೂಡ, "ಆಫೀಸಿನಲ್ಲಿ ಪರಿಸರಕ್ಕಾಗಿ ಓಟ" ಹಮ್ಮಿಕೊಂಡಿದ್ದಾರೆ. ಎಮ್.ಡಿ. ಕೂಡಾ ಬರ್ತಾರೆ. ನಾನೂ ಸಾಧ್ಯವಾದಷ್ಟು ಓಡಲೇಬೇಕು. ಆದರೆ ಇತ್ತೀಚೆಗೆ ನಡೆದೇ ಅಭ್ಯಾಸವಿಲ್ಲ. ಮನೆ... ಕಾರು... ಬಿಟ್ಟರೆ ಆಫೀಸು. ಇನ್ನು ಓಡುವದೆಲ್ಲಿಂದ ಬಂತು? ಅದಕ್ಕೆ ನಿನ್ನ ಕಾಲು ಕೊಟ್ಟಿರೋ. ಬರುವಾಗ ಅದಕ್ಕೇಂತ ಒಂದು ಜೊತೆ ಶೂಸ್ ತೊಗೊಂಡು ಬರ್ತೀನಿ" ಎನ್ನುತ್ತಿದ್ದರು. ಮಗರಾಯ ಖುಷ್. ತಂಗಿಯರು ಅಕ್ಕಂದಿರಿಗೆ, "ನಾಳೆ ಕಾಲೇಜಿನಲ್ಲಿ ಕ್ಯಾಟ್‌ವಾಕ್ ಇದೆ. ರ್‍ಯಾಂಪ್ ಮೇಲೆ ಹೆಜ್ಜೆ ಹಾಕಬೇಕು. ನಿನ್ನ ಕಾಲು ನೀಳವಾಗಿ ಚೆನ್ನಾಗಿವೆ. ಕೊಟ್ಟಿರು ಪ್ಲೀಸ್. ನೀನು ಯಾವತ್ತು ತನುಜ್ ಜೊತೆ ಹೋದ್ರೂ ಮನೇಲಿ ಹೇಳೋಲ್ಲ" ಎಂದು ದುಂಬಾಲು ಬೀಳುತ್ತಿದ್ದರು.

ನಟನಟಿಯರು, ಸೆಲೆಬ್ರಿಟಿಗಳು ತಮ್ಮ ಕಾಲುಗಳಿಗೆ ವಿಮೆ ಇಳಿಸಿ ಅವುಗಳ ಸೌಂದರ್ಯ ಕಾಪಾಡುವಲ್ಲೇ ಹೆಚ್ಚಿನ ಆಸ್ಥೆ ವಹಿಸುತ್ತಿದ್ದರು. ಜಗತ್ತಿನ ಖ್ಯಾತ ಮಾಡೆಲ್ ನವೋಮಿ ಕ್ಯಾಂಪ್‌ಬೆಲ್‌ಳ ಕಾಲುಗಳಂತೆ ಅವು ದಾಖಲೆಯ ಮೊತ್ತಕ್ಕೆ ವಿಮೆಯಾಗಿರುತ್ತಿದ್ದವು. ನಂತರ ಸೆಲೆಬ್ರಿಟಿಗಳನ್ನು ಕಿಡ್ನ್ಯಾಪ್ ಮಾಡಿ ಒದ್ದಾಡದೇ ಅವರ ಕೈಯೋ, ಕಾಲೋ ತೆಗೆದುಕೊಂಡು ಹೋದರೆ ಸಾಕಿತ್ತು. ಜೀವದ ಭಯ ಇರುತ್ತಿರಲಿಲ್ಲ. ಪೊಲೀಸರೂ ಟೆನ್ಷನ್ ಕಡಿಮೆ ಮಾಡಿಕೊಂಡು ಹುಡುಕುತ್ತಿದ್ದರು. ಇವೆಲ್ಲವುಗಳ ಮಧ್ಯೆ ಬಡವರಿಗೆ ಒಂದು ಆಶಾಕಿರಣವಿರುತ್ತಿತ್ತು. ಕೈ, ಕಾಲುಗಳನ್ನು ಬಾಡಿಗೆಗೆ ಕೊಟ್ಟು ಅವರು ಹೊಟ್ಟೆ ಹೊರೆಯಬಹುದಿತ್ತು. "ಓನರಮ್ಮ ಅದ್ಯಾವುದೋ ದೇವಸ್ಥಾನಕ್ಕೆ ನಡ್ಕೊಂಡು ಬರ್ತೀನೀಂತ ಹರಕೆ ಕಟ್ಕೊಂಡವ್ರಂತೆ. 'ಕಪ್ಪಗಿದ್ರೂ ನಿನ್ನ ಕೈ, ಕಾಲು ಗಟ್ಟಿಗಿದ್ದಾವಲ್ಲ... ಒಂದಿನ ಕೊಡು' ಅಂತ ಈಸ್ಕೊಂಡು ಹೋಗವ್ರೆ. ಅವಳ ಕೈ, ಕಾಲ್ಗೆ ಏನೂ ಮಾಡಿ ಅಭ್ಯಾಸ ಇಲ್ಲಾ ಅನಸ್ತೈತೆ. ಬೆಳಗ್ಗಿಂದ ಏನೂ ಕೆಲ್ಸಾ ಮಾಡಕ್ಕಾಯ್ತಿಲ್ಲ. ಕುಂತೇ ಇವ್ನಿ" ಎಂದು ಮನೆ ಕೆಲಸದವಳು ಇನ್ನೊಬ್ಬಳ ಮುಂದೆ ಅಲವತ್ತುಕೊಳ್ಳುವ ದೃಶ್ಯ ಕಾಣಬರುತ್ತಿತ್ತು. ಟ್ರಾಫಿಕ್ ಪೊಲೀಸರು, ದೂರ ಪ್ರಯಾಣ ಮಾಡುವ ಡ್ರೈವರ್‌ಗಳು ಅವಶ್ಯಕತೆ ಇರುವವರು ಎಕ್ಸ್‌ಟ್ರಾ ಕೈ ಇಟ್ಟುಕೊಂಡೇ ಮನೆಯಿಂದ ಹೊರಡುತ್ತಿದ್ದರು. ಕಾನೂನಿನ ಪರಿಧಿಯಲ್ಲೂ ತಮ್ಮದಲ್ಲದ ಕೈ, ಕಾಲುಗಳಿಂದ, ಮಾಡಿದ ಅಪರಾಧಗಳಿಗೆ ಬೇರೆ ಶಿಕ್ಷೆಗಳು ಇರುತ್ತಿದ್ದವು.

ಈ ಜೋಡಿಸಿಕೊಳ್ಳುವ ಪಾರ್ಟುಗಳಲ್ಲಿ ವಿಂಗಡಣೆ ಇದ್ದು ಆಕಾರ, ಗಾತ್ರ, ಸ್ತ್ರೀ, ಪುರುಷ, ಸಮಾನವಯಸ್ಸು, ಸಮಾನ ಗಾತ್ರಗಳಿಗೆ ಮಾತ್ರ ಹೊಂದಿಕೆಯಾಗುವಂತಿದ್ದರೆ ಇವೆಲ್ಲ ಸೌಲಭ್ಯಗಳ ಸ್ವರೂಪ ಬೇರೆಯೇ ಆಗಿರುತ್ತಿತ್ತು. ಆಗ ಅಮ್ಮ, "ಏ, ನನ್ನ ಕೈ ಬರಲ್ವೋ, ಪಕ್ಕದ ಮನೆ ದೀಪುಗೆ ಜ್ವರ ಬಂದು ಮಲಗಿದ್ದಾನೆ. ಸ್ಕೂಲಿಗೆ ಹೋಗಲ್ವಂತೆ. ಅವನ ಕೈ ಕೇಳು ಹೋಗು" ಎಂದು ಕಳಿಸಬಹುದಿತ್ತು. ದೊಡ್ಡ ದೊಡ್ಡ ಯೋಗಿಗಳು, ಸಂತರು, "ನಿಮ್ಮ ಕೈ, ಕಾಲುಗಳು ಅನೈತಿಕ ಕೆಲಸ ಮಾಡದೇ ಸತ್ಕಾರ್ಯ ಮಾಡುವಂತೆ ನೋಡಿಕೊಳ್ಳಿ" ಎಂದು